# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 66/2021

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ರೆಡ್ಡಪ್ಪ | ಫ್ರಾಸಾಃ | 18 |
| **ತಂದೆಯ ಹೆಸರುಃ** | ನರಸಿಂಹಪ್ಪ | ಚಾಸಾಃ | 34 |
| **ವಯಸ್ಸುಃ** | 45 | ಪ್ರಮಾಣ ವಚನ ಭೋದಿಸಿದ ದಿನಾಂಕ: | 23-09-2025 |
| **ಉದ್ಯೋಗಃ** | ಹೆಚ್.ಸಿ | | |
| **ವಾಸ ಸ್ಥಳಃ** | ಚಿಂತಾಮಣಿ | | |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ದಿ.*20.03.2021* ರಂದು ನಾನು ಶಿಡ್ಲಘಟ್ಟ ನಗರ ಠಾಣೆಯಲ್ಲಿ ಹೆಚ್.ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಮದ್ಯಾಹ್ನ *02.30* ಕ್ಕೆ ನಾನು ಠಾಣೆಯಲ್ಲಿ ಊಟ ಮಾಡುತ್ತಿದ್ದೆ, ಆಗ ಚಾಸಾ-*35* ರವರೊಂದಿಗೆ ಚಾಸಾ-*33* ರವರು ಠಾಣಾ ಮುಂಭಾಗದಲ್ಲಿ ನಿಂತಿದ್ದಾಗ ಸರ್ಕಾರಿ ಆಸ್ಪತ್ರೆ ಮುಂಭಾಗ ಗಲಾಟೆ ಶಬ್ಧ ಕೇಳಿಸಿದ್ದು, ಚಾಸಾ-*33* ಮತ್ತು ಚಾಸಾ-*35* ರೊಂದಿಗೆ ಅಲ್ಲಿಗೆ ಧಾವಿಸಿದ್ದರು. ನಾನು ಊಟ ಬಿಟ್ಟು ರಸ್ತೆಗೆ ಓಡಿ ಬಂದೆ. ಆ ಸಮಯದಲ್ಲಿ ಘಟನಾ ಸ್ಥಳದ ಕಡೆಯಿಂದ ಒಂದು ಓಮಿನಿ ಕೆಎ-*40*-ಎಂ-*1633* ವೇಗದಿಂದ ನಮ್ಮನ್ನು ಹಾದು ಹೋಗಿದ್ದು, ನಿಲ್ಲಿಸುವಂತೆ ಸೂಚಿಸಿದ್ದರು ಸಹ, ನಿಲ್ಲಿಸದಿದ್ದಾಗ ಚಾಸಾ-*35* ರವರು ಅಲ್ಲಿಯೇ ಬಿದ್ದಿದ್ದ ಕಲ್ಲಿನಿಂದ ವ್ಯಾನ್ ನ ಡೋರ್ ಗೆ ಹೊಡೆದಿದ್ದು, ನಾನು ಸಹ ಲಾಟಿಯಿಂದ ವ್ಯಾನ್ ನಿಲ್ಲಿಸಲು ಪ್ರಯತ್ನಿಸಿದ್ದರು ಸಹ ಸದರಿ ವ್ಯಾನ್ ವೇಗವಾಗಿ ನನ್ನ ಪ್ರಾಣಕ್ಕೆ ಅಪಾಯವಾಗುವಂತೆ ಚಾಲನೆ

ಮಾಡಿ ಅಲ್ಲಿಂದ ಹೊರಟು ಹೋಯಿತು. ನಂತರ ಚಿತಾ ಬೈಕ್ ನಲ್ಲಿ ನಾನು ಮತ್ತು ಚಾಸಾ-*35* ಅದನ್ನು ಹಿಂಬಾಲಿಸಿದ್ದೇವು. ಸದರಿ ವ್ಯಾನ್ ಹಿಡಿಯಲು ಆಗಲಿಲ್ಲ. ಸದರಿ ವ್ಯಾನ್ ನಲ್ಲಿ *4* ಜನ ಇದ್ದುದ್ದನ್ನು ಗಮನಿಸಿದ್ದೇವು. ನಂತರ ಠಾಣೆಗೆ ಹಿಂದಿರುಗಿದಾಗ ಆಸ್ಪತ್ರೆ ಬಳಿ ಹೋಗಿ ನೋಡಲಾಗಿ ಒಂದು ಮೃತ ದೇಹ ಬಿದ್ದಿದ್ದು , ಆತ ಅಜ್ಮುದ್ ಎನ್ನುವ ಪರಿಚಿತ ವ್ಯಕ್ತಿಯಾಗಿದ್ದ. ಆತನ ಮೈ ಮೇಲೆ ಗಾಯಗಳಾಗಿದ್ದವು. ಶವವನ್ನು ಆಸ್ಪತ್ರೆಗೆ ರವಾನಿಸಿದ್ದೇವು. ಒಂದು ದಿನದ ನಂತರ ಆರೋಪಿಗಳನ್ನು ಬಂಧಿಸಿದಾಗ ಮೃತನಿಗೂ ಹಾಗೂ *1* ನೇ ಆರೋಪಿಗು ವೈಶಮ್ಯಗಳಿದ್ದು, ಆತನ ಕಡೆಯವರು ಕೊಲೆ ಮಾಡಿದ್ದಾಗ ತಿಳಿದು ಬಂತು. ಆ ದಿನ ವ್ಯಾನ್ ಗೆ ಎತ್ತಿ ಹಾಕಿದ್ದ ಕಲ್ಲು ಈಗ ನೋಡುತ್ತಿದ್ದು ಮು.ಮಾ.*30* ಎಂದು ಗುರುತಿಸಲಾಗಿದೆ. ನಾನು ಹಿಡಿದಿದ್ದ ಲಾಟಿಯನ್ನು ನೋಡಿದರೆ ಗುರುತಿಸಬಲ್ಲೆ.

**<u>ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ.ಬಿ.ಎಸ್. ವಕೀಲರಿಂದ ಪಾಟೀ ಸವಾಲು</u>**

ನಾನು 20 ವರ್ಷ ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡಿದ್ದೇನೆ. ನಾನು ಇಲಾಖೆಗೆ ಕಾನ್ ಸ್ಟೇಬಲ್ ಆಗಿ ಸೇರಿಕೊಂಡು ಹೆಡ್ ಕಾನ್ ಸ್ಟೇಬಲ್ ಆಗಿದ್ದೇನೆ. ನನಗೆ ಪ್ರತಿಯೊಂದು ಹಂತದ ಅಧಿಕಾರಿಯ ಕಾರ್ಯವ್ಯಾಪ್ತಿ ಗೊತ್ತು. ಘಟನಾ ಸಮಯದಲ್ಲಿ ನಾನು ಮುಖ್ಯಪೇದೆ ಆಗಿದ್ದೆ. ನನಗೆ ತರಬೇತಿ ಆಗಿದ್ದೆ. ನಾನು ಊಟಕ್ಕೆ ಕುಳಿತಾಗ 02-30 . 5-10 ನಿಮಿಷ ಊಟ ಮಾಡಿದ್ದೆ. ನಾನು ನೆಲಮಹಡಿಯಲ್ಲಿ ಊಟ ಮಾಡುತ್ತಿದ್ದೆ. ಅಲ್ಲಿ ಸಿಸಿ ಕ್ಯಾಮೆರಾ ಮೊನಿಟರ್ ಇದೆ. ಅವು ಸಾಹೇಬರ ಕೋಣೆಯಲ್ಲಿದೆ. ಘಟನಾ ಸ್ಥಳ ಠಾಣೆಯಿಂದ 400 ಅಡಿ ದೂರ. ನಮ್ಮ ಠಾಣೆ ರಸ್ತೆಗೆ ಹೊಂದಿಕೊಂಡಂತೆ ಇದೆ.

ರಸ್ತೆಯಿಂದ 5 ಅಡಿ ದೂರದಲ್ಲಿ ಕಾಂಪೌಂಡ್ ಇದೆ. ಅಲ್ಲಿಂದ 10 ಅಡಿ ದ್ವಾರದಲ್ಲಿ ಆಯುಧ ಸಹಿತ ಸೆಂಟ್ರಿ ಕಾರ್ಯ ನಿರ್ವಹಿಸುತ್ತಾನೆ ಎಂದರೆ ಸರಿ. ಆ ದಿನ ಸೆಂಟ್ರಿ ಯಾರಿದ್ದರೆಂದು ನೆನಪಿಲ್ಲ. ನಮ್ಮ ಬಳಿ ಆಯುಧಗಳು ಇರಲಿಲ್ಲ.

ರಸ್ತೆಯ ಆಗು ಹೋಗುಗಳು ಠಾಣೆಯ ಸಿಸಿ ಕ್ಯಾಮರಾದಲ್ಲಿ ದಾಖಲಾಗುತ್ತದೆ ಎಂದರೆ ಸರಿ. ಚಾಸಾ-34 ನಿಂತಿದ್ದು ಹಾಗೂ ವಾಹನ ಹೋಗಿದ್ದು ಕೂಡ ದಾಖಲಾಗಿರುತ್ತದೆ ಎಂದರೆ ಸರಿ. ರೈಲ್ವೆ ಬ್ರಿಡ್ಜ್ ನಿಂದ ಪೋಲಿಸ್ ಠಾಣೆ ಕಡೆ ರಸ್ತೆ ಏರು ಮುಖವಾಗಿದೆ ಎಂದರೆ ಸರಿ. ಹಂಪ್ಸ್ ಇದೆ ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ 10 ರಿಂದ 20 ಕಿ.ಮೀ. ವೇಗಕ್ಕಿಂತ ಹೆಚ್ಚಿನ ವೇಗದಲ್ಲಿ ಹೋಗಲು ಸಾಧ್ಯವಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಗೇರ್ ನಲ್ಲಿ ಮಾತ್ರ ಓಡಿಸಬಹುದು ಎಂದರೆ ಇರಬಹುದು. ಚಾಸಾ-35 ತನಿಖಾಧಿಕಾರಿಯ ಸಹಾಯಕರು ಎಂದರೆ ಸರಿ. ವಾಹನಗಳ ವೇಗ ಹೆಚ್ಚು ಮಾಡಲು ಗೇರ್ ಬದಲಿಸಬೇಕಾಗಿರುತ್ತದೆ ಎಂದರೆ ಸರಿ. ಠಾಣೆಯಿಂದ ಮುಂದೆ ತಾಲೂಕು ಕಚೇರಿ ಬಳಿ ತಿರುವು ಇದೆ ಎಂದರೆ ಸರಿ. ಸದರಿ ರಸ್ತೆ ವಾಹನ ಹಾಗೂ ಜನ ಸಂದಣಿಯಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಅಲ್ಲಿ ವೇಗಾವಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಆ ದಿನ ಠಾಣೆಯಲ್ಲಿ ಸೆಂಟ್ರಿ ಮತ್ತು ಎಸ್.ಹೆಚ್.ಓ ಮಾತ್ರ ಇದ್ದರು.

ಚಾಸಾ-33 ಮತ್ತು ಚಾಸಾ-35 ರವರು ಕೂಗಿದ ಶಬ್ಧ ಕೇಳಿಸಿತು. ನಾನು ರಸ್ತಗೆ ಹೋಗುವಷ್ಟರಲ್ಲಿ ಅವರಿಬ್ಬರೂ ಠಾಣೆಯಿಂದ 100 ಮೀ. ದೂರದಲ್ಲಿದ್ದರು. ಸೆಂಟ್ರಿ

ನನ್ನೊಂದಿಗೆ ಬರಲಿಲ್ಲ. ಸದರಿ ಜಾಗದಲ್ಲಿ ಹಲವು ಇಲಾಖೆಗಳ ಸಿಸಿ ಟಿವಿ ಕವರೇಜ್ ಇದೆ ಎಂದರೆ ಸರಿ. ಆಟೋ ಸ್ಟ್ಯಾಂಡ್ , ಹೋಟೆಲ್ ಕೂಡ ಇದೆ ಎಂದರೆ ಸರಿ. ನಮ್ಮ ಠಾಣೆಯಿಂದ ದಿಬ್ಬೂರಹಳ್ಳಿ ರಸ್ತೆ ಕಡೆ 500 ಮೀ.ದೂರದಲ್ಲಿ ಗ್ರಾಮಾಂತರ ಠಾಣೆ ಇದೆ ಎಂದರೆ ಸರಿ. 2 ಠಾಣೆಗಳ ಮಧ್ಯೆ 2-3 ಹಂಪ್ಸ್ ಇದೆ ಎಂದರೆ ಸರಿ. ನಾವು ಗ್ರಾಮಾಂತರ ಠಾಣೆಯೊಂದಿಗೆ ಸಂವಹನ ಹೊಂದಿರುತ್ತೇವೆ ಎಂದರೆ ಸರಿ. ನಾನು ರಸ್ತೆಯಲ್ಲಿ ವ್ಯಾನ್ ತಡೆಯಲು ನಿಂತುಕೊಂಡಿದ್ದೆ. ಆ ದಿನ ನಾನು ಠಾಣೆಯ ಮುಂದೆ ಲಾಟಿಯೊಂದಿಗೆ ವ್ಯಾನ್ ತಡೆಯಲು  ನಿಂತಿರಲಿಲ್ಲ , ಯಾವುದೇ ವಾಹನ ನಮ್ಮನ್ನು ಹಾದು ಹೋಗಿಲ್ಲ , ನಾವು ತಡೆಯುವ ಪ್ರಯತ್ನವೇ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-35 ಮಾರ್ನಾಲ್ಕು ಅಡಿ ದೂರದಿಂದ ಮು.ಮಾ.30 ನ್ನು ಎಸೆದಿದ್ದರು. ಸದರಿ ಕಲ್ಲಿಗೆ ನಾವು ವಿಶಿಷ್ಠ ಗುರುತು ಮಾಡಿರಲಿಲ್ಲ. ಮು.ಮಾ.30 ನ್ನು ವ್ಯಾನ್ ಕಡೆ ಎಸೆದಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕೈಯಲ್ಲಿ ಆಯುಧ ಇಲ್ಲದ ಕಾರಣ ಲಾಟಿಯಿಂದ ವ್ಯಾನ್ ತಡೆಯಲು ಪ್ರಯತ್ನಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ  ಎಂದರೆ ಸರಿಯಲ್ಲ. ಆ ದಿನ ನನ್ನನು ಗಸ್ತು ಕರ್ತವ್ಯಕ್ಕೆ ನಿಯೋಜಿಸಿರಲಿಲ್ಲ , ನಾನು ಠಾಣೆಯ ಒಳಗೆ ಊಟ ಮಾಡುತ್ತಾ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ್ದ 4 ಆರೋಪಿಗಳು ವ್ಯಾನ್ ನಲ್ಲಿ  ಇರಲಿಲ್ಲ , ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಅಬಲೋಡು ಗ್ರಾಮದವರೆಗೆ ಚೇಜ್ ಮಾಡಿದ್ದೆ. ಆ ಸಮಯದಲ್ಲಿ ನನಗೆ ಘಟನಾ ಸ್ಥಳದಲ್ಲಿ ಏನು ನಡೆದಿತ್ತು ಎಂದು

ಗೊತ್ತಿಲ್ಲ.

ನಾವು ಅಪರಾಧ ಜರುಗಿರಬಹುದೆಂಬ ಅನುಮಾನದಿಂದ ವ್ಯಾನ್ ತಡೆಯಲು ಪ್ರಯತ್ನಿಸಿದ್ದೆವು. ಆ ಸಮಯದಲ್ಲಿ ನಾವು ಬೇರೆ ವಾಹನಗಳನ್ನು ನಿಲ್ಲಿಸುವ ಪ್ರಯತ್ನ ಮಾಡಲಿಲ್ಲ. ನಾನು ವಾಹನಕ್ಕೆ ಅಡ್ಡ ನಿಂತಿರಲಿಲ್ಲ , ರಸ್ತೆಯಲ್ಲಿ ನಿಂತಿದ್ದೆ. ನನ್ನ ಮೇಲೆ ವಾಹನ ಹತ್ತಿಸಲು ಬಂದಿದ್ದರು. ತಪ್ಪಿಸುಕೊಳ್ಳುವಾಗ ನಾನು ಬೀಳಲಿಲ್ಲ. ಠಾಣೆಗೆ ಹಿಂದಿರುಗಿದಾಗ ಜರುಗಿಸಿದ ವಿಚಾರವನ್ನು ಠಾಣಾಧಿಕಾರಿಗೆ ತಿಳಿಸಿದ್ದೆ. ತಕ್ಷಣ ನಾನು ವಾಹನ ಚಾಲಕನ ವಿರುದ್ಧ ದೂರು ಕೊಡಲಿಲ್ಲ. ನಾನು ಘಟನಾ ಸ್ಥಳಕ್ಕೆ ಹೋಗುವವರೆಗೆ ಅಲ್ಲಿ ನಡೆದಿದ್ದ ವಿಚಾರ ನನಗೆ ಗೊತ್ತಿರಲಿಲ್ಲ. ಇಷ್ಟೆಲ್ಲ ಪ್ರಕ್ರಿಯೆಗಳು 1 ಗಂಟೆ ಅವಧಿಯೊಳಗೆ ಜರುಗಿದೆ. ಠಾಣೆಯಿಂದ ನಾನು ಠಾಣಾಧಿಕಾರಿಯ ಸೂಚನೆಯ ಮೇರೆಗೆ ಆಸ್ಪತ್ರೆಗೆ ಹೋದೆ. ಅಲ್ಲಿಗೆ ನನ್ನನು ನಿಯೋಜಿಸಲಾಗಿತ್ತು. ಘಟನಾ ಸ್ಥಳಕ್ಕೆ ನಿಯೋಜಿಸಿರಲಿಲ್ಲ. ಅಲ್ಲಿ ಏನೆಲ್ಲಾ ನಡೆಯಿತು ಎಂದು ನನಗೆ ಗೊತ್ತಿಲ್ಲ. ಚಾಸಾ-33 ಹಾಗೂ ಚಾಸಾ-35 ರವರನ್ನು ಎಲ್ಲಿಗೆ ನಿಯೋಜಿಸಿದ್ದರೆಂದು ನನಗೆ ಗೊತ್ತಿಲ್ಲ. ಅವರು ಆಸ್ಪತ್ರೆಗೆ ನಿಯೋಜನೆ ಆಗಿರಲಿಲ್ಲ. ಅರ್ಧ ಗಂಟೆಯ ನಂತರ ನಾನು ಆಸ್ಪತ್ರೆಯಿಂದ ಠಾಣೆಗೆ ಹೋದೆ. ಆಗ ಪಿ.ಎಸ್.ಐ ಇದ್ದರು. ಅವರಿಗೆ ನನ್ನ ಮೇಲೆ ವಾಹನ ಹತ್ತಿಸಲು ಪ್ರಯತ್ನಿಸಿದ ವಿಚಾರ ಹೇಳಲಿಲ್ಲ. ಆ ಪರಿಸ್ಥಿತಿಯಲ್ಲಿ ಹೇಳಲು ಆಗಿರಲಿಲ್ಲ. ಅವರು ನನ್ನನು ವಿಚಾರಿಸಲಿಲ್ಲ. ಎಸ್.ಹೆಚ್.ಒ ನನ್ನ ವರದಿಯನ್ನು ಎಸ್.ಹೆಚ್.ಡಿ ಯಲ್ಲಿ ದಾಖಲಿಸಿದ್ದರೋ

ಅಥವಾ ಇಲ್ಲವೋ ಗೊತ್ತಿಲ್ಲ. ನಮ್ಮ ಕರ್ತವ್ಯಕ್ಕೆ ಯಾರದರೂ ಅಡ್ಡಿ ಪಡಿಸಿದ್ದಲ್ಲಿ ತಕ್ಷಣ ದೂರು ದಾಖಲಿಸುತ್ತೇವೆ ಎಂದರೆ ಸರಿ. ನಾನು ಅದೇ ದಿನ ದೂರು ನೀಡಿದ್ದೇನೆ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ, ಆರೋಪಿಗಳಿಗೂ ಈ ಘಟನೆಗೂ ಸಂಬಂಧವೇ ಇಲ್ಲದಿದ್ದರೂ, ಪಿರ್ಯಾದಿ  ಹಾಗೂ ತನಿಖಾಧಿಕಾರಿಯವರೊಂದಿಗೆ ಶಾಮೀಲಾಗಿ ಕರ್ತವ್ಯ ಲೋಪ ಮರೆಮಾಚಲು ಸುಳ್ಳು ಕತೆ ಕಟ್ಟಿದ್ದೇವೆ ಎಂದರೆ ಸರಿಯಲ್ಲ. **(1, 4 ರಿಂದ 7 ಮತ್ತು 9 ನೇ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲು ಅನುಮೋದಿಸಿದ್ದಾರೆ).**

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)                    ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ23.09.2025  
**(ಕೆ.ಎಂ.ರಾಜಶೇಖರ)**  
ಸ್ಥಳಃ ಚಿಂತಾಮಣಿ  
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,  
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.